ದಿಃ 08-10-2025 ರಂದು ಆದ ಆದೇಶದ ಮೇರೆಗೆ ದಿ: 07-08-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಎಂ.ಎಸ್ ವಕೀಲರಿಂದ:-

25. ನಮ್ಮ ಮತ್ತು ಆರೋಪಿತರ ನಡುವೆ ಜಾಗದ ಬಗ್ಗೆ ವಿವಾದ ಇತ್ತು ಎಂದರೆ ಸರಿ. ಆ ಸಂಬಂಧ ನಾನು ಠಾಣೆಗೆ ಹೋಗಿದ್ದೆ ಎಂದರೆ ಸರಿ. ನಮ್ಮ ಜಾಗದ ವಿವಾದವನ್ನು ಬಗೆಹರಿಸುವ ಸಲುವಾಗಿ ಆರೋಪಿತರ ವಿರುದ್ಧ ನಮ್ಮ ಹಿತೈಷಿಗಳ ಒತ್ತಾಯದ ಮೇರೆಗೆ ಮತ್ತು ಅವರ ಹೇಳಿಕೆ ಮೇರೆಗೆ ಈ ರೀತಿಯ ದೂರನ್ನು ನೀಡಿದ್ದೆ ಎಂದರೆ ಸರಿ.

26. ನಾನು ಕೆಲಸ ಮಾಡುತ್ತಿರುವಾಗ ಬಿದ್ದು ಗಾಯ ಮಾಡಿಕೊಂಡಿದ್ದೆ ಎಂದರೆ ಸರಿ. ದೂರಿನಲ್ಲಿ ಹೇಳಿದಂತೆ ಆರೋಪಿತರಿಗೂ ನಮಗೂ ಯಾವುದೇ ರೀತಿಯ ಜಗಳವಾಗಿರುವುದಿಲ್ಲ ಎಂದರೆ ಸರಿ. ನಮ್ಮ ಜಾಗದ ವಿವಾದ ನಮ್ಮ ಪರವಾಗಿ ಆಗಲಿ ಎಂದು ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೆ ಎಂದರೆ ಸರಿ. ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿ.

ಮರು ವಿಚಾರಣೆಃ ಮಾನ್ಯ ಪಿ.ಪಿ. ರವರಿಂದಃ

27. ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ ಮಾನಸಿಕ ಸ್ಥಿತಿ ಸರಿಯಾಗಿತ್ತು ಎಂದರೆ ಸರಿ. ನಾನು ಯಾರ ಒತ್ತಾಯಕ್ಕೂ ಸಾಕ್ಷ್ಯ ಹೇಳಿರಲಿಲ್ಲ ಎಂದರೆ ಸರಿ. ನಾವು ಮತ್ತು ಆರೋಪಿತರು

ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡಿದ್ದರಿಂದ ನಡೆದ ವಿಚಾರ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದರೂ ಆರೋಪಿತರ ಕೋರಿಕೆಯ ಮೇರೆಗೆ ಅವರಿಗೆ ಸಹಾಯವಾಗಲೆಂದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು 4 ಗುಂಟೆ ಜಾಗವನ್ನು ನಮಗೆ ಬಿಟ್ಟು ಕೊಟ್ಟಿದ್ದರಿಂದ ನಾವು ರಾಜಿ ಮಾಡಿಕೊಂಡಿರುತ್ತೇವೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ